ಸಚಿವರನ್ನು ಕೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಕೂಡ ಎರಡು ತಾಲ್ಲೂಕಿನಲ್ಲಿ ಇದೆ. ಅಲ್ಲಿ ಜಿಲ್ಲಾಪರಿಷತ್ತಿನ ರಸ್ತೆಗಳೆಲ್ಲಾ ಹಾಳಾಗಿ ಹೋಗಿವೆ. ಆ ರಸ್ತೆಗಳು ಸ್ವಲ್ಪವೂ ಚೆನ್ನಾಗಿಲ್ಲ. ಅದಕ್ಕೋಸ್ಕರ ಈಗ ನನ್ನ ಕ್ಷೇತ್ರಕ್ಕೆ ಎಷ್ಟು ಕೊಡುತ್ತಾರೆ ? ಮೊಳಕಾಲ್ಮೂರು ತಾಲ್ಲೂಕಿಗೆ ಎಷ್ಟು ಕೊಡುತ್ತಾರೆ ? ಚಳ್ಳಕೆರೆ ತಾಲ್ಲೂಕಿಗೆ ಎಷ್ಟು ಕಿ.ಮೀ. ರಸ್ತೆಯನ್ನು ಕೊಡುತ್ತಾರೆ ? ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡುತ್ತೇವೆಂದು ಮಾನ್ಯ ಸಚಿವರು ನನಗೆ ಉತ್ತರ ಹೇಳಬೇಕು.

ಶ್ರೀ ಜಿ.ಹೆಚ್.ಆಶ್ವತ್ಥರೆಡ್ಡಿ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೆ ಉತ್ತರ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಸೇರಿದೆ ಎಂದು ಹೇಳುತ್ತಿದ್ದಾರೆ. ಈ ಎರಡು ತಾಲ್ಲೂಕುಗಳು ಸೇರಿದರೆ ಒಂದು ತಾಲ್ಲೂಕಿನಲ್ಲಿ 30 ಕಿ.ಮೀ. ಇನ್ನೊಂದು ತಾಲ್ಲೂಕಿನಲ್ಲಿ 20 ಕಿ.ಮೀ. ರಸ್ತೆಯನ್ನು ಕೊಡಲಿ, ಎರಡು ತಾಲ್ಲೂಕಿನಲ್ಲಿ ಒಂದು ಕ್ಷೇತ್ರ ಬರುತ್ತದೆ. ಅದರಿಂದ ಏನು ತೊಂದರೆಯಾಗುವುದಿಲ್ಲ.

ಶ್ರೀ ಎನ್.ಜಿ.ನಾಯಕ್ :- 57 ಕಿ.ಮೀ. ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾನು ಆಗಲೇ ಎಸ್ಟಿಮೇಟ್‌ನ್ನು ಕಳುಹಿಸಿಕೊಟ್ಟಿದ್ದೇನೆ, ಅದು ಇದುವರೆಗೂ ಸ್ಯಾಂಕ್ಷನ್ ಆಗಿಲ್ಲ. ಈಗ ಮಾರ್ಚ್ ಕೊನೆಯಾಯಿತು. ದಯವಿಟ್ಟು ಯಾವಾಗ ಇದನ್ನು ಸ್ಯಾಂಕ್ಷನ್ ಮಾಡುತ್ತೀರಿ. ಯಾವಾಗ ಕೆಲಸ ಮಾಡುತ್ತೀರಿ, ಇದಕ್ಕೆ ದಯವಿಟ್ಟು ಉತ್ತರ ಹೇಳಬೇಕು.

ಶ್ರೀ ಜಿ.ಹೆಚ್. ಆಶ್ವತ್ಥರೆಡ್ಡಿ :- ಏಪ್ರಿಲ್ ತಿಂಗಳಿಂದ ಜಾರಿಗೆ ಬರುತ್ತದೆ.

ಅಧ್ಯಕ್ಷರು :- ನಾಯಕ್‌ರವರೆ, ಏಪ್ರಿಲ್ 1ನೇ ತಾರೀಖಿನವರೆಗೆ ಕಾಯಿರಿ.

ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವದ ವೆಚ್ಚ

(976)ಶ್ರೀ ಪೆರಿಕಲ್ .ಎಂ.ಮಲ್ಲಪ್ಪ (ಚಿಕ್ಕಪೇಟೆ)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ)

ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಔರಾದ್):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ 1992ರ ಜನವರಿ 24 ರಂದು ಬೆಂಗಳೂರಿನಲ್ಲಿ ನಡೆದ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆದ ಒಟ್ಟು ವೆಚ್ಚವೆಷ್ಟು ?

ಆ ಇದರಲ್ಲಿ ಕೇಂದ್ರ ಸರ್ಕಾರ ನೀಡಿದ ಹಣ

ಇ ರಾಜ್ಯ ಸರ್ಕಾರ ಮಾಡಿರುವ ವೆಚ್ಚ

ಈ ಕೇಂದ್ರ ಸರ್ಕಾರದಿಂದ ಬರಬೇಕಾಗಿರುವ ಹಣ

ಶ್ರೀ ಕೆ.ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ ರೂ. 3,03,42,254-00

ಆ ಇದರಲ್ಲಿ ಕೇಂದ್ರ ಸರ್ಕಾರ ಖರ್ಚು ಮಾಡಿರುವ ಹಣ ರೂ. 92.00ಲಕ್ಷಗಳು.

ಇ ಚಲನಚಿತ್ರೋತ್ಸವ ಏರ್ಪಡಿಸಲು ರೂ. 80,79,254-00
ತಗುಲಿದ ವೆಚ್ಚ.
ಚಲನಚಿತ್ರೋತ್ಸವ ಸಂದರ್ಭದಲ್ಲಿ ರೂ. 1,30,63.000-00
ಶಾಸ್ವತ ಕಾಮಗಾರಿ ಹಾಗೂ ಉಪಕರಣ
ಖರೀದಿ ಇತ್ಯಾದಿಗಳಿಗೆ ತಗುಲಿದ ವೆಚ್ಚ

ಒಟ್ಟು ರೂ. 2,11,42,254-00

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರಶ್ನೆ ಇರುವುದು ಏನೆಂದರೆ , 1992ನೇ ಜನವರಿ 24ನೇ ತಾರೀಖು ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕಾಗಿ ಆದ ಒಟ್ಟು ವೆಚ್ಚ ಎಷ್ಟು ಎಂದು. ಅದಕ್ಕೆ 3 ಕೋಟಿ, 3 ಲಕ್ಷ ಎಂದು ಹೇಳಿದ್ದಾರೆ. ಇದರಲ್ಲಿ ಕೇಂದ್ರಸರ್ಕಾರದಿಂದ 92 ಲಕ್ಷ ರೂಪಾಯಿ ಬಂದಿದೆ, ರಾಜ್ಯ ಸರ್ಕಾರದಿಂದ 2 ಕೋಟಿ 11 ಲಕ್ಷ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆಯಲ್ಲಿ ಎರಡು ಮಹತ್ವವಾದ ವಿಷಯಗಳು ಇವೆ. ಒಟ್ಟು ವೆಚ್ಚ ಎಷ್ಟು ಎಂದು ಕೇಳಿದರೆ ಇವರು ಸರಿಯಾಗಿ ಉತ್ತರ ಕೊಟ್ಟಿಲ್ಲ. ನನ್ನ ಅಂದಾಜು ಪ್ರಕಾರ ಸುಮಾರು 6-7 ಕೋಟಿ ಖರ್ಚು ಮಾಡಿದ್ದಾರೆ. ಪಿ.ಡಬ್ಲ್ಯೂ.ಡಿ.ಯಿಂದಲೇ ಸುಮಾರು ಎರಡೂವರೆ ಕೋಟಿ ರೂಪಾಯಿ ಈ ರೋಡ್ ರಿಪೇರಿ ಮಾಡಿಸುವುದಕ್ಕೆ ಉಪಯೋಗಿಸಿದ್ದಾರೆ. ಮತ್ತು ಬೆಂಗಳೂರು ಸಿಟಿ ಕಾರ್ಪೊರೇಷನ್‌ನಿಂದ ಸುಮಾರು 2 ಕೋಟಿ 80 ಲಕ್ಷ ರೂಪಾಯಿಗಳನ್ನು ರೋಡ್ ರಿಪೇರಿ ಇತ್ಯಾದಿ ಎಂದು ಮಾಡಿಸಿದ್ದಾರೆ. ಮತ್ತೆ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಯೂತ್‌ಸರ್ವೀಸ್ ಡಿಪಾರ್ಟ್‌ಮೆಂಟ್‌ನಿಂದ ಸ್ಪೇಡಿಯಂ ರಿಪೇರಿ ಮತ್ತು ಇನ್ನಿತರ ರಿಪೇರಿ ಎಂದು ಹೇಳಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಸಿದ್ದಾರೆ. ಈ ರೀತಿಯಾಗಿ ನಾನಾ ಡಿಪಾರ್ಟ್‌ಮೆಂಟ್‌ಗಳಿಂದ ಖರ್ಚು ಮಾಡಿಸಿರುವ ಒಟ್ಟು ವೆಚ್ಚ ಎಷ್ಟು ಎಂದರೆ ಇವರು ಸರಿಯಾಗಿ ಮಾಹಿತಿ ಕೊಟ್ಟಿಲ್ಲ, 3 ಕೋಟಿ ಎಂದು ಹೇಳಿದ್ದಾರೆ. ಈ ಚಲನಚಿತ್ರೋತ್ಸವ ಕಿರಿಕಿರಿ ಯಿಂದಲೇ ಶುರು ಆಯಿತು ಎನ್ನುವುದು ತಮಗೆ ಗೊತ್ತೇ ಇದೆ. ಆಹ್ವಾನಿತರು ಎಷ್ಟು ಎಂದು ತಮಗೂ ಗೊತ್ತಿದೆ. ಸುಮಾರು 2 ಸಾವಿರ ಜನ ಎಂದು ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಕೇವಲ 2 ಸಾವಿರ ಜನ ಆಹ್ವಾನಿತರಿಗೆ, ಅದೂ ನಮ್ಮ ನೆರೆಹೊರೆ ರಾಜ್ಯಗಳವರಾದ ತಮಿಳುನಾಡಿನವರಾಗಲೀ, ಆಂಧ್ರದವರಾಗಲೀ, ಬೊಂಬಾಯಿಯವರಾಗಲೀ ಅಥವಾ ವೆಸ್ಟ್ ಬೆಂಗಾಲ್‌ನವರಾಗಲೀ ನಮ್ಮ ದೇಶದಲ್ಲಿನ ಚಲನಚಿತ್ರೋತ್ಸವಕ್ಕೆ ಬರಲೇ ಇಲ್ಲ. ಇವರೆಲ್ಲಾ ಬಾಯ್‌ಕಾಟ್ ಮಾಡಿದರು. ಆದರೂ ಚಲನಚಿತ್ರೋತ್ಸವವನ್ನು ಇವರ ಪ್ರತಿಷ್ಠೆಗಾಗಿ ನಡೆಸಿದರು, ಇವರು 7 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಯಾವ ಮಾಹಿತಿಯನ್ನೂ ಕೂಡ ಸರಿಯಾಗಿ ಕೊಡುತ್ತಾ ಇಲ್ಲ. ಇದು ಏಕೆ ? ಎರಡನೆಯ ಪ್ರಶ್ನೆ ಏನೆಂದರೆ, ಯಾವ ಡಿಪಾರ್ಟ್‌ಮೆಂಟ್‌ನಿಂದ ಈ ಚಲನಚಿತ್ರೋತ್ಸವವನ್ನು ನಡೆಸಿದರು, ಇದನ್ನು ಯೂತ್‌ಸರ್‌ವೀಸಸ್‌ನಿಂದ ನಡೆಸಿದ್ದಾರೆಯೇ ? ಇನ್‌ಫರ್‌ಮೇಷನ್ ಮತ್ತು ಟೂರಿಸಮ್ ಡಿಪಾರ್ಟ್‌ಮೆಂಟ್‌ನಿಂದ ಈ ಚಲನಚಿತ್ರೋತ್ಸವ ನಡೆಸಿದ್ದಾರೆಯೇ ? ಅದಕ್ಕೆ ಯಾರು ಇನ್‌ಚಾರ್ಜ್ ಇದ್ದರು ? ಅದು ಇವತ್ತಿಗೂ ಗೊತ್ತಾಗುತ್ತಿಲ್ಲ. ಏಕೆಂದರೆ, ಈ ಪ್ರಶ್ನೆ ಪಟ್ಟಿಯಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಉತ್ತರ ಕೊಡುತ್ತಾರೆ ಎಂದು ಕೊಟ್ಟಿದ್ದಾರೆ. ಆದರೆ ಈ ಪ್ರಿಂಟೆಡ್ ಫಾರಂನಲ್ಲಿ ಯೂತ್ ಸರ್ವೀಸಸ್ ಡಿಪಾರ್ಟ್‌ಮೆಂಟ್‌ನಿಂದ ಉತ್ತರ ಕೊಡುತ್ತಾರೆ ಎಂದು ಇದೆ. ಈ ಚಲನಚಿತ್ರೋತ್ಸವದಲ್ಲಿ ಯಾವ ಮಿನಿಷ್ಟರು ಏನಕ್ಕೆ ಇದ್ದರು ಎಂದು ಯಾರಿಗೂ ಗೊತ್ತಾಗಲಿಲ್ಲ. ಇದು ಸ್ವಲ್ಪ, ಅವರು ಸರಿಯಾಗಿ ಹೇಳಬೇಕಾಗುತ್ತದೆ.

ಶ್ರೀ ಎಸ್.ರಮೇಶ್:- ಈ ಚಲನಚಿತ್ರೋತ್ಸವ ನಡೆದಾಗ ಮಾನ್ಯ ಮುಖ್ಯ ಮಂತ್ರಿಗಳು ವಾರ್ತಾಇಲಾಖೆ ಇಟ್ಟುಕೊಂಡಿದ್ದರು. ಕನ್ನಡ ಅಂಡ್ ಕಲ್ಚರಲ್ ಮಿನಿಸ್ಟರ್ ನಾನಾದ್ದರಿಂದ

ನನ್ನನ್ನು ವೈಸ್ ಛೇರ್ಮನ್ ಎಂದು ಮಾಡಿದರು. ವಾರ್ತಾ ಇಲಾಖೆಯ ಶ್ರೀಮಾನ್ ಶಿವಮೂರ್ತಿಯವರು ಬಂದಾಗ ಅವರನ್ನೂ ವೈಸ್‌ಛೇರ್ಮನ್ ಆಗಿ ಮಾಡಿದರು. ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದರು. ಆದ್ದರಿಂದ ತಾವು ಪ್ರಶ್ನೆ ಕೇಳಬೇಕಾದರೆ ವಾರ್ತಾ ಸಚಿವರಿಗೆ ಕೇಳಿ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಚಲನಚಿತ್ರೋತ್ಸವ ನಡೆದಿದ್ದು ಯಾವ ರೀತಿ, ಅದಕ್ಕೋಸ್ಕರ ಯಾರು ಇನ್‌ಚಾರ್ಜ್ ಇದ್ದರು, ಯಾವ ಮಿನಿಸ್ಟರ್ ಇನ್‌ಚಾರ್ಜ್ ಇದ್ದರು ಎಂದು ಸ್ವಲ್ಪ ತಾವು ಸಭೆಗೆ ಹೇಳಿದರೆ ಚೆನ್ನಾಗಿ ಇರುತ್ತದೆ. ಆಗ ಎಲ್ಲರಿಗೂ ಸಹ ಅರ್ಥವಾಗುತ್ತದೆ. ಆಮೇಲೆ ಯಾರಾದರೊಬ್ಬರು ಮಿನಿಸ್ಟರ್ ಉತ್ತರ ಕೊಡಲಿ. ಇಲ್ಲಿ ಎರಡೂ ಪ್ರಶ್ನೆಗೂ ಉತ್ತರ ಕೊಡಬೇಕು.

ಶ್ರೀ ಎಸ್.ರಮೇಶ್:- ಮಾನ್ಯ ಮಿತ್ರರಾದಂತಹ ಪೆರಿಕಲ್ ಮಲ್ಲಪ್ಪನವರಿಗೆ ಚಿತ್ರೋತ್ಸವ ಹೇಗೆ ನಡೆಯಿತು ಎಂದು ಗೊತ್ತು.

ಶ್ರೀ ವಾಟಾಳ್ ನಾಗರಾಜ್:- ಈಗ ಇಬ್ಬರು ಮಿನಿಸ್ಟರುಗಳು ಇದ್ದಾರೆ. ಮಾನ್ಯ ಪೆರಿಕಲ್‌ಮಲ್ಲಪ್ಪನವರು ಕೇಳುವಂಥದ್ದು ವಾರ್ತಾ ಸಚಿವರನ್ನು ಉತ್ತರ ಕೊಡುತ್ತಿರುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು . ಇದು ಒಂದು ದ್ವಂದ್ವ ಆಗುತ್ತಿದೆ. ಆದುದರಿಂದ ಏಕಕಾಲದಲ್ಲಿ ಇಬರೂ ಎದ್ದು ನಿಂತುಕೊಂಡು ಉತ್ತರ ಕೊಡಲಿ. ಈ ಪ್ರಶ್ನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಿದ್ದೆ ಅಥವಾ ವಾರ್ತಾ ಇಲಾಖೆಗೆ ಸಂಬಂಧಪಟ್ಟಿದ್ದೆ ಎಂದು ತಾವು ದಯಮಾಡಿ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು :- ಉತ್ತರವನ್ನು ಸರ್ಕಾರದ ಪರವಾಗಿ ಯಾರಾದರೂ ಕೊಡಬಹುದು. ಈಗಾಗಲೇ ಅವರು ಎದ್ದು ನಿಂತಿದ್ದಾರೆ, ಅವರು ಉತ್ತರ ಕೊಡುತ್ತಾರೆ.

ಶ್ರೀ ಎಸ್.ರಮೇಶ್:- ಈಗ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತು ಚಲನಚಿತ್ರೋತ್ಸವದಲ್ಲಿ ಇಬ್ಬರು ವೈಸ್‌ಛೇರ್ಮನ್ ಇದ್ದರು ಎಂದು. ಎಕ್ಸಿಕ್ಯೂಟಿವ್ ವೈಸ್ ಛೇರ್‌ಮನ್ ಆಗಿ ನನ್ನನ್ನು ಮಾಡಿದ್ದರಿಂದ ಮುಖ್ಯವಾದ ಪಾತ್ರವನ್ನು ನಾನು ನಿರ್ವಹಿಸಬೇಕಾಯಿತು. ಒಂದು ಮಾತ್ರ ತಾವು ಎಲ್ಲರೂ ಒಪ್ಪಿಕೊಳ್ಳುತ್ತೀರಿ ಎಂದು ನನ್ನ ಅಭಿಪ್ರಾಯ. ದೇಶದ ಏಕತೆ ಮತ್ತು ಸಮಗ್ರತೆ ಪ್ರಶ್ನೆ ಈ ಚಲನ ಚಿತ್ರೋತ್ಸವ ಹಿಂದೆ ಇತ್ತು. ಇದು ನಮ್ಮ ರಾಜ್ಯದಿಂದ ನಾವು ತೀರ್ಮಾನ ಮಾಡಿರತಕ್ಕಂಥ ಚಲನಚಿತ್ರೋತ್ಸವ ಅಲ್ಲ. ಪ್ರತೀ ವರ್ಷ ಚಲನಚಿತ್ರೋತ್ಸವದ ಕಡೇ ದಿನ ಮುಂದಿನ ಚಿತ್ರೋತ್ಸವ ಯಾವ ರಾಜ್ಯದಲ್ಲಿ ನಡೆಯಬೇಕು, ಮಾಡಬೇಕು ಎಂದು ತೀರ್ಮಾನವಾಗಿರುತ್ತದೆ. ಈಗ ಶ್ರೀಮಾನ್ ಪೆರಿಕಲ್ ಮಲ್ಲಪ್ಪನವರು ಕೇಳಿದ್ದು ಏನೆಂದರೆ, ಚಲನಚಿತ್ರೋತ್ಸವ ಯಾರು ಮಾಡಿದರು ಎಂದು. ಮಾಡಿದ್ದು ನಾನೇ. ಇದು ಇಡೀ ರಾಜ್ಯಕ್ಕೂ ಗೊತ್ತಿದೆ, ತಮಗೆಲ್ಲರಿಗೂ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಚಲನಚಿತ್ರೋತ್ಸವ ಪ್ರಾರಂಭವಾದ ದಿನ ನಾವೆಲ್ಲ ಪೋಲಿಸ್ ಸ್ಟೇಷನ್‌ನಲ್ಲಿ ಇದ್ದೆವು. ಸ್ವಾಮಿ, ನಮ್ಮನ್ನೆಲ್ಲ ಪೋಲಿಸ್ ಸ್ಟೇಷನ್‌ಗೆ ಕಳುಹಿಸಿ, ಸುತ್ತಲೂ ಮಿಲಿಟರಿ ತಂದಿಟ್ಟು ಕೊಂಡು ಇವರು ಚಲನಚಿತ್ರೋತ್ಸವ ನಡೆಸಿದರು. ಇವರು ನಮಗೆಲ್ಲ ಗೊತ್ತು ಎಂದು ಹೇಳುತ್ತಾರೆ. ನಮಗೇನು ಗೊತ್ತಿದೆ, ನಮ್ಮನ್ನೇನು ಕರೆದಿದ್ದರೆ, ಆಹ್ವಾನಿಸಿದ್ದರೆ, ಏಕೆ ಈ ಸಭೆಯಲ್ಲಿ ಇಷ್ಟೊಂದು ಸತ್ಯಕ್ಕೆ ದೂರವಾದ ಮಾತನ್ನು ತಾವು ಹೇಳುತ್ತಿದ್ದೀರಿ. ನಮಗೆ ಬಂದಿಲ್ಲ ಗೊತ್ತಿಲ್ಲ ನಾವೂ ಚಂದ್ರೇಗೌಡರು ಎಲ್ಲ ಪಕ್ಕದ ಒಂದು ಪೋಲಿಸ್ ಸ್ಟೇಷನ್‌ನಲ್ಲಿ

ಇದ್ದೆವು.

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೇ, ನೀವು ಸ್ಪೇಷನ್‌ಗೆ ಹೋಗತಕ್ಕ ಅಭ್ಯಾಸವನ್ನು ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್:- ನಾನು ಬಿಟ್ಟರೂ ಅವರು ಬಿಡುವುದಿಲ್ಲ.

ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ :- ಅವರು ಸ್ಪೇಷನ್‌ಗೆ ಹೋಗುತ್ತಿಲ್ಲ, ಜೈಲಿಗೆ ಹೋಗುತ್ತಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಸ್ಪೇಷನ್‌ಗೆ ನಾವು ಹೋಗಲಿಲ್ಲ, ಇವರು ಕಳುಹಿಸಿದ್ದು. ನಮಗೆ ಹೋಗುವ ಅಭ್ಯಾಸವಿಲ್ಲ. ಅಂದಮೇಲೆ ಬಿಡಬೇಕಾದ ಪ್ರಮೇಯವೂ ಬರುವುದಿಲ್ಲ.

ಶ್ರೀ ಎಸ್.ರಮೇಶ್:- ಅಧಿರಿಗೆ ಕರೆದುಕೊಂಡು ಹೋಗಿ ಅಭ್ಯಾಸ ಇದೆ. ನಾನು ಯೂತ್ ಕಾಂಗ್ರೆಸ್ ಪ್ರೆಸಿಡೆಂಟ್ ಆಗಿದ್ದಾಗ ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿದ್ದಾರೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ನಾನು ಕೇಳಿದ್ದು ಪಿ.ಡಬ್ಲ್ಯೂ.ಡಿ. ನಿಂದ ಎಷ್ಟು ಖರ್ಚುಮಾಡಿದ್ದಾರೆ, ಬೆಂಗಳೂರು ನಗರ ಕಾರ್ಪೊರೇಷನ್‌ನಿಂದ ಎಷ್ಟು ಖರ್ಚುಮಾಡಿದ್ದಾರೆ, ತೋಟಗಾರಿಕೆ ಇಲಾಖೆಯಿಂದ ಎಷ್ಟು ಖರ್ಚುಮಾಡಿದ್ದಾರೆಂದು ಕೇಳಿದ್ದೇವೆ. ಇದಕ್ಕೂ ಕೂಡ ಉತ್ತರವನ್ನು ಕೊಟ್ಟಿಲ್ಲ. ನೀವು ಎಷ್ಟು ಜನರನ್ನು ಆಹ್ವಾನ ಮಾಡಿದ್ದೀರಿ ಎಂದು ಕೇಳಿದ್ದರೆ ಅದಕ್ಕೂ ಕೂಡ ಉತ್ತರವನ್ನು ಕೊಟ್ಟಿಲ್ಲ, ಮತ್ತು ಮೂರನೆಯದಾಗಿ ಯಾರ್ಯಾರಿಗೆ ಏನೇನು ನೆನಪಿನ ಕಾಣಿಕೆಯನ್ನು ಕೊಟ್ಟಿರಿ ಎಂದರೆ ಅದಕ್ಕೂ ಕೂಡ ಉತ್ತರವನ್ನು ಕೊಟ್ಟಿಲ್ಲ. ಆದುದರಿಂದ ದಯವಿಟ್ಟು ನನ್ನ ಈ ಮೂರು ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಶಿವಮೂರ್ತಿ:- ಈ ಉತ್ಸವಕ್ಕೆ ರಾಜ್ಯಸರ್ಕಾರದ ವತಿಯಿಂದ 2,11,42,254 ರೂಪಾಯಿಗಳು ಖರ್ಚಾಗಿದೆ. ಇದಕ್ಕಾಗಿ ಕೇಂದ್ರ ಸರ್ಕಾರ 92 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಇದೂ ಸೇರಿ ಒಟ್ಟು 3,03,42,254 ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರು ಏನು ಕೇಳುತ್ತಿದ್ದಾರೆಂದರೆ, ಪಿ.ಡಬ್ಲ್ಯೂ.ಡಿಯವರು ಎಷ್ಟು ಖರ್ಚುಮಾಡಿದ್ದಾರೆ, ಕಾರ್ಪೊರೇಷನ್‌ನವರು ಎಷ್ಟುಖರ್ಚುಮಾಡಿದ್ದಾರೆಂದು ಕೇಳಿದ್ದಾರೆ. ಅವರು ಖರ್ಚುಮಾಡಿರತಕ್ಕದ್ದು ನಿಜ. ಅವರು ನಮಗೆ ಒಟ್ಟಿಗೆ ಲೆಕ್ಕ ಕೊಟ್ಟಿಲ್ಲ ಕಾರ್ಪೊರೇಷನ್‌ನವರು ಕೊಟ್ಟಿರತಕ್ಕದ್ದು ಪ್ರತ್ಯೇಕವಾಗಿದೆ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಅವರು ಖರ್ಚುಮಾಡಿದಮೇಲೆ ನಮಗೆ ಕಳುಹಿಸಿಕೊಡುತ್ತಾರೆ. 2,83,629 ರೂಪಾಯಿಗಳನ್ನು ಶಾಶ್ವತ ಕಾಮಗಾರಿಗೋಸ್ಕರ ಕಾರ್ಪೊರೇಷನ್‌ನವರು ಖರ್ಚುಮಾಡಿದ್ದಾರೆ. ರಸ್ತೆಗಳು ಚೆನ್ನಾಗಿರಬೇಕು ಒಳ್ಳೆಯ ವ್ಯವಸ್ಥೆಯಾಗಬೇಕೆಂದು ಖರ್ಚುಮಾಡಿದ್ದಾರೆ. ಇದು ಒಂದು ಅವಕಾಶ ಅಂತರ್‌ರಾಷ್ಟ್ರೀಯ ಚಲನಚಿತ್ರೋತ್ಸವ ಸಂದರ್ಭದಲ್ಲಿ ಇದನ್ನು ಮಾಡಿದ್ದಾರೆ. ಹಿಂದೆ ಏಷ್ಯಾಡ್ ನಡೆದ ಸಂದರ್ಭದಲ್ಲಿ ಕೂಡ ಒಳ್ಳೊಳ್ಳೆಯ ಕಟ್ಟಡಗಳನ್ನು ಕಟ್ಟಿಸಿಕೊಂಡೆವು, ಹಳೇ ಕಟ್ಟಡಗಳನ್ನು ರಿಪೇರಿ ಮಾಡಿಸಿಕೊಂಡೆವು. ಇದೇರೀತಿ ಸಾರ್ಕ್ ಸಮ್ಮೇಳನ ನಡೆದ ಸಂದರ್ಭದಲ್ಲಿ ಕೆಲವು ಅಸೆಟ್ಸ್‌ನ್ನು ಕ್ರಿಯೇಟ್ ಮಾಡಿಕೊಂಡೆವು. ಈ ದಿಸೆಯಲ್ಲಿ ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಪಿ.ಡಬ್ಲ್ಯೂ.ಡಿ. ನವರು ಕೆಲಸಮಾಡಿದ್ದಾರೆ. 3,33,42,254 ರೂಪಾಯಿಗಳಲ್ಲಿ ಸುಮಾರು 98ಲಕ್ಷ ರೂಪಾಯಿಗಳನ್ನು ನಾವು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಿದ್ದೇವೆ. ಏಕೆಂದರೆ ರವೀಂದ್ರ ಕಲಾ ಕ್ಷೇತ್ರವನ್ನು ರಿಪೇರಿ ಮಾಡುವುದಕ್ಕೆ, ಕೆಲವು ಫರ್ನಿಚರ್ಸ್‌ನ್ನು ಫಿಟಿಂಗ್ ಮಾಡುವುದಕ್ಕೆ ಕೆಲವು ಉಪಕರಣಗಳನ್ನು

ಕೊಂಡು ಕೊಳ್ಳುವುದಕ್ಕೆ ಹೀಗೆ ಎಲ್ಲಾ ಸೇರಿ ಅವರಿಗೆ ಕೊಟ್ಟರತಕ್ಕುದ್ದು 98 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಈ ಹಣ 3 ಕೋಟಿ ರೂಪಾಯಿಗಳಲ್ಲಿ ಸೇರಿಕೊಂಡಿದೆ. ಇದನ್ನು ಬಿಟ್ಟರೆ ಕಾರ್ಪೊರೇಷನ್‌ನವರು 2.83 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇನ್ನೂ ಯಾವ ಯಾವ ಬಾಬಿಗೆ ಖರ್ಚುಮಾಡಿದ್ದಾರೆಂದು ಮಾನ್ಯ ಸದಸ್ಯರು ಕೇಳಿದರೆ ಅದಕ್ಕೂ ನಾನು ವಿವರ ಕೊಡಬಯಸುತ್ತೇವೆ. ಕಂಠೀರವ ಕ್ರೀಡಾಂಗಣದಲ್ಲಿ ಉದ್ಘಾಟನಾ ಸಮಾರಂಭಕ್ಕೆ 18,93,230 ರೂಪಾಯಿ ಖರ್ಚಾಗಿದೆ. ಪ್ರಚಾರ ಮತ್ತು ಪ್ರಕಟಣೆಗಾಗಿ 6,65,900 ರೂಪಾಯಿ ಖರ್ಚಾಗಿದೆ. ಪ್ರತಿನಿಧಿಗಳಿಗೆ ನೆನಪಿನ ಕಾಣಿಕೆಯನ್ನು ಕೊಡುವುದಕ್ಕೆ 11.64 ಲಕ್ಷ ರೂಪಾಯಿ ಖರ್ಚಾಗಿದೆ. ಮಾನ್ಯ ಮುಖ್ಯ ಮಂತ್ರಿಗಳ ಟೀ ಕೂಟ, ವಾರ್ತಾ ಸಚಿವರ ಔತಣ ಕೂಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಔತಣ ಕೂಟ, ಎಂದು ಬಂದಿದ್ದ ಡೆಲಿಗೇಟ್ಸ್‌ಗೆ ಔತಣ ಕೂಟ ಕೊಟ್ಟರತಕ್ಕದ್ದು, ಏನಿದೆ ಅದಕ್ಕೆ 3,50,284 ರೂಪಾಯಿಗಳು ಖರ್ಚಾಗಿದೆ. ಅತಿಥಿ ಸತ್ಕಾರ ಕೂಟಕ್ಕೆಂದು ಒಟ್ಟು 1,43,645 ರೂಪಾಯಿಗಳು ಖರ್ಚಾಗಿದೆ. ಇದರಲ್ಲಿ ಗಣ್ಯ ವ್ಯಕ್ತಿಗಳು ತಂಗುವುದಕ್ಕೆ ಲಾಡ್ಜಿಂಗ್ ಛಾರ್ಜಸ್ 64,651 ರೂಪಾಯಿ ಖರ್ಚಾಗಿದೆ. ಚಲನ ಚಿತ್ರದ ಸಿಬ್ಬಂದಿಯವರಿಗೆ ಹೋಟೆಲ್/ ಅಶೋಕದಲ್ಲಿ ಲಾಡ್ಜಿಂಗ್ ಬಾಡಿಗೆಗಾಗಿ 6,387 ರೂಪಾಯಿಗಳು ಖರ್ಚಾಗಿದೆ. ಮಾಧ್ಯಮ ಕೇಂದ್ರವನ್ನು ನಿರ್ಮಾಣ ಮಾಡುವುದಕ್ಕೆ 2,29,480 ರೂಪಾಯಿಗಳು ಖರ್ಚಾಗಿದೆ. ಕಾನೂನು ಮತ್ತು ಶಿಸ್ತು ಪಾಲನೆಗೋಸ್ಕರ ಪೋಲಿಸ್ ಸಿಬ್ಬಂದಿ ವೆಚ್ಚ ಮತ್ತು ರೈತ ಸಂಘದವರು ಇನ್ನೂ ಬೇರೆಯವರನ್ನು ಅರೆಸ್ಟ್ ಮಾಡಿದ್ದರಿಂದ ಅವರಿಗೆ ಊಟ ಕೊಡಿಸಿರತಕ್ಕುದ್ದು, ಇದ್ದೆಲ್ಲಾ ಸೇರಿ ಒಟ್ಟು 90,782 ರೂಪಾಯಿ ಖರ್ಚಾಗಿದೆ. ಮತ್ತೆ ಸಾರಿಗೆ ವೆಚ್ಚ. . . .

ಶ್ರೀಮತಿ ದಮಯಂತಿ ಬೋರೇಗೌಡ:- ರೈತಸಂಘದವರು ನಿಮಗೆ ಗೆಸ್ಟ್ ಆಗಿದ್ದರೆ ?

ಶ್ರೀ ಕೆ.ಶಿವಮೂರ್ತಿ:- ಆಗ ಚಲನಚಿತ್ರೋತ್ಸವವನ್ನು ನಡೆಸಬಾರದೆನ್ನತಕ್ಕಂಥ ನಿಲುವು ಅವರದಾಗಿತ್ತು. ಅದು ಅವರನ್ನೆಲ್ಲ ಅರೆಸ್ಟ್ ಮಾಡಿರತಕ್ಕಂಥ ಸಂದರ್ಭ. ಶಿಸ್ತುಪಾಲನಾ ದೃಷ್ಟಿಯಿಂದ ಮುಜಾಗರೂಕತಾ ಕ್ರಮ ತೆಗೆದುಕೊಂಡಿದ್ದೇವೆ. ಅವರಿಗೆಲ್ಲಾ ಊಟ ಕೊಟ್ಟಿದ್ದೇವೆ. ಸಾರಿಗೆ ವೆಚ್ಚ ಆಗಿರತಕ್ಕಂಥಾದ್ದು ಒಟ್ಟು 4,70,000 ರೂಪಾಯಿಗಳು. ಇದರಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ.ಬಸ್‌ಗಳು ಮತ್ತು ಇತರ ಕಾರುಗಳು ಅವೆಲ್ಲ ಸೇರಿಕೊಂಡಿರುತ್ತದೆ. ಮತ್ತೆ ಈ ಉತ್ಸವಕ್ಕಾಗಿ ಥಿಯೇಟರ್ ಒಳಗೆ ಮಾಡಿರತಕ್ಕಂಥ ಖರ್ಚು 11,80,683 ರೂಪಾಯಿಗಳು ಮತ್ತು ನಿರೀಕ್ಷಿತ ವೆಚ್ಚ 5 ಲಕ್ಷ 95 ಸಾವಿರ ರೂಪಾಯಿಗಳು. ಮತ್ತೆ ಇತರ ವೆಚ್ಚಗಳು 55,000. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆಗ ಒಟ್ಟು ವೆಚ್ಚ 80 ಲಕ್ಷ 79 ಸಾವಿರ 254 ರೂಪಾಯಿಗಳು. ಇದರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್‌ವಿಟೇಷನ್ ಬಗ್ಗೆ ಕೇಳುತ್ತಿದ್ದಾರೆ. ಒಟ್ಟು ಎಷ್ಟು ಇನ್‌ವಿಟೇಷನ್ಸ್ ಇತ್ತು ಎನ್ನುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಅದನ್ನು ಕೊಡಬಯಸುತ್ತೇನೆ. No.of invitations printed 7,000 , No. of invitations distributed 6550. Invitations distributed through the Karnataka Film Chamber of Commerce 3,000 , Invitations distributed to the officers and Press through the Department of Information and Publicity 700, Distributed by the Directorate of the Film Festival 1,000 Distributed to the mediapersons by

Directorate of Film Festival 350, Invitations distributed to MLA's, MLC and Ministers, MP's 1500.

ಶ್ರೀಮತಿ ದಮಯಂತಿ ಬೋರೇಗೌಡ:- ಇದು ಸತ್ಯಕ್ಕೆ ದೂರವಾದ ಮಾತು. Most of the MLA's ಗೆ ಇನ್‌ವಿಟೇಷನ್ ಬಂದಿಲ್ಲ.

Sri T.B.JAYACHANDRA :- Most of the M.L.A.'s ಅಲ್ಲ ಯಾರಿಗೂ ಕಳುಹಿಸಿಲ್ಲ

ಶ್ರೀ ಪೆರಿಕಲ್.ಎಂ.ಮಲ್ಲಪ್ಪ:- ಮಾನ್ಯ ಅಧ್ಯಕ್ಷರೆ, ಕಂಠೀರವ ಸ್ಟೇಡಿಯಂನಲ್ಲಿ ಸುಮಾರು 2000-2500 ಜನರು ಬಂದಿದ್ದರು. ಇದರಲ್ಲಿ 1500 ಜನರು ಬರೀ ಪೋಲೀಸ್‌ನವರು ಸಿವಿಲ್ ಡ್ರಸ್‌ನಲ್ಲಿದ್ದರು. ಏತಕ್ಕೆಂದರೆ ಗಲಾಟೆಗಳಾಗುತ್ತದೆಂದು ಬಂದಿದ್ದರು. ನಮ್ಮ ಎಂ.ಎಲ್.ಎ, ಎಂ.ಎಲ್.ಸಿ, ಗಳಿಗೆ ಯಾರಿಗೂ ಇನ್‌ವಿಟೇಷನ್ ತಲುಪಿಲ್ಲ ಎಂದು ಬಹಳಷ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಸತ್ಯವಾದ ಮಾತು ಎಂದಾಯಿತು ? ಎಂಎಲ್‌ಎ ಮತ್ತು ಎಂ.ಎಲ್.ಸಿ, ಎಂ.ಪಿ.ಗಳಿಗೂ ಇನ್‌ವಿಟೇಷನ್‌ಗಳನ್ನು ಕೊಟ್ಟಿಲ್ಲ. ಯಾರೋ ಕೆಲವರಿಗೆ ಕೊಟ್ಟಿರಬಹುದು. ಮತ್ತೆ ಅಲ್ಲಿ ಬಂದಿರುವವರು ಕೇವಲ ಒಂದು 500 ಜನ ಇನ್‌ವೈಟೀಸ್ ಇರಬಹುದು. 500 ಜನ ಇನ್‌ವೈಟೀಸ್ ಬಂದಿರುವವರಿಗೆ ಇವರ ಮಾಹಿತಿ ಪ್ರಕಾರ ಸುಮಾರು 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮತ್ತು ಮೊಮೆಂಟೊಗಳಿಗೆ ಸುಮಾರು 11 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. 200 ಜನಗಳಿಗೆ ಮೊಮೆಂಟೊಗಳನ್ನು ಕೊಟ್ಟರೂ ಒಬ್ಬೊಬ್ಬರಿಗೆ 8000 ದಿಂದ 9000 ರೂಪಾಯಿಗಳ ವ್ಯಾಲ್ಯುಬಲ್ ಮೊಮೆಂಟೋಗಳನ್ನು ಕೊಟ್ಟಿರಬಹುದು. ಅದು ಎಂಥ ಮೊಮೆಂಟೊಗಳು ಎನ್ನುವುದನ್ನು ಈ ಸಭೆಗೆ ಮಾನ್ಯ ಸಚಿವರು ಹೇಳಬೇಕಾಗುತ್ತದೆ. ಅವರು ಏನು ಮೊಮೆಂಟ್ ಕೊಟ್ಟಿದ್ದಾರೆ ಅದನ್ನು ಬಂಗಾರದಲ್ಲಿ ಮಾಡಿಕೊಟ್ಟಿದ್ದಾರೋ, ಬೆಳ್ಳಿಯಲ್ಲಿ ಮಾಡಿಕೊಟ್ಟಿದ್ದಾರೋ ಅಥವಾ ಶ್ರೀಗಂಧದಲ್ಲಿ ಮಾಡಿಕೊಟ್ಟಿದ್ದಾರೋ, ಅದರ ಬಗ್ಗೆ ಈ ಸಭೆಯಲ್ಲಿ ಹೇಳಬೇಕಾಗುತ್ತದೆ. ಮತ್ತು ಈ ಚಲನಚಿತ್ರೋತ್ಸವ ಸಭೆಗೆ ನಮ್ಮ ಕರ್ನಾಟಕದ ಚಿತ್ರೋತ್ಸವ ಸೆಲಬರೇಟೆಡ್ ಕಲಾವಿದರೇ ಬರಲಿಲ್ಲ. ನೆರೆಹೊರೆ ರಾಜ್ಯಗಳ ಕಲಾವಿದರೂ ಬರಲಿಲ್ಲ. ಬಾಂಬೆಯಿಂದ ಕಲಾವಿದರೂ ಬರಲಿಲ್ಲ. ಫಾರಿನ್‌ನಿಂದ ಬಂದಿದ್ದರೆಂದು ಹೇಳಿದ್ದಾರೆ. ಅದು ನಿಜವಿರಬಹುದು. ದಯವಿಟ್ಟು ಕಲಾವಿದರೆಲ್ಲ ಏತಕ್ಕೆ ಬರಲಿಲ್ಲ ಎಂದು ಹೇಳಬೇಕು.

ಅಧ್ಯಕ್ಷರು :- ನೀವು ಪ್ರಶ್ನೆ ಕೇಳಿ. ಕಲಾವಿದರು ಬರಲಿಲ್ಲವೆಂದು ಇವರು ಹೇಗೆ ಹೇಳುತ್ತಾರೆ ?

ಶ್ರೀ ಎಸ್.ರವೀಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಪೆರಿಕಲ್‌ಮಲ್ಲಪ್ಪನವರು ಇನ್‌ವಿಟೇಷನ್ ಬಗ್ಗೆ ಮಾತನಾಡಿದರು. ಚಲನಚಿತ್ರೋತ್ಸವಕ್ಕೆ ಸ್ಥಳ ನಿಗದಿಯಾಗಿದ್ದೇ ಮೂರು ದಿವಸಕ್ಕೆ ಮುಂಚೆ. ಅದು ಯಾವ ಪರಿಸ್ಥಿತಿಯಲ್ಲಿತ್ತೆಂಬುದು ತಮಗೂ ಗೊತ್ತಿದೆ. ಕೈಲಾದಷ್ಟು ಶಕ್ತಿ ಮೀರಿ ಪರ್ಸನಲ್ಲಾಗಿ ಮುಟ್ಟಿಸಬೇಕೆನ್ನುವ ಆದೇಶ ನಮ್ಮದು ಇತ್ತು. ಏಕೆಂದರೆ ಪರಿಸ್ಥಿತಿ ತಮಗೆ ಗೊತ್ತಿತ್ತು. ನಾವು ಎಂ.ಎಲ್.ಎ ರೂಮ್‌ಗಳಿಗೆ ಇನ್‌ವಿಟೇಷನ್‌ಗಳನ್ನು ಕಳುಹಿಸಿ ಕೊಟ್ಟಿರುತ್ತೇವೆ. ಅದನ್ನು ಬೇರೆಯವರು ಯಾರಾದರು ತೆಗೆದುಕೊಂಡು ಹೋಗಬಹುದು. ಮೊನ್ನೆ ಒಂದು ಡೆಲಿಗೇಟರಿ ಪಾಸ್ ತೆಗೆದುಕೊಂಡು ಬಂದು ಸ್ಟೇಡಿಯಂ ಮೇಲೆ ಕೂಗ ಹತ್ತಿದರು. ಅದಕ್ಕೆ ಅವಕಾಶವಾಗಬಾರದೆಂದು ಹೇಳಿ ನಾನು ಪ್ರತಿಯೊಬ್ಬ ಎಂ.ಎಲ್.ಎ ಗೂ ಕಳುಹಿಸಿದ್ದೇನೆ. ಮಾನ್ಯ ಮಲ್ಲಪ್ಪನವರ ಮನೆಗೆ ನಾನೇ ಕಳುಹಿಸಿದ್ದೇನೆ. ಅವರು ಇಲ್ಲವೆಂದರೆ ಸಂಬಂಧಪಟ್ಟ ಅಧಿಕಾರಿಗಳನ್ನು

ನಾನು ಸಸ್‌ಪೆಂಡ್ ಮಾಡಬೇಕಾಗುತ್ತದೆ. ದೂರದೂರದಲ್ಲಿರುವವರಿಗೆ ಅದಷ್ಟು ಸ್ಪೀಡ್‌ಪೋಸ್ಟ್‌ನಲ್ಲಿ ಪೋಲೀಸ್ ಸರ್ವೀಸ್‌ನಲ್ಲಿ ಇನ್‌ವಿಟೇಷನ್ ಕಳುಹಿಸಿಕೊಟ್ಟಿದ್ದೇವೆ. ಇದೇ ಪರಿಸ್ಥಿತಿಯಲ್ಲಿ ಬೇರೆ ಯಾರಿದ್ದರೂ ಇಷ್ಟು ಮಾಡಲಿಕ್ಕೆ ಸಾಧ್ಯವಾಗುತ್ತಿತ್ತೇ ಏನ: ಇನ್ನು ಏನು ಮಾಡಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಮತ್ತೆ ಮಾನ್ಯ ಸದಸ್ಯರು ಚಿನ್ನ ಕೊಟ್ಟಿದ್ದೀರಾ, ಬೆಳ್ಳಿ ಕೊಟ್ಟಿದ್ದೀರಾ ಎಂದು ಕೇಳಿದರು. ನಮ್ಮ ರಾಜ್ಯಕ್ಕೆ ಚಿನ್ನ ಕೊಡುವ ಯೋಗ್ಯತೆ ಬಂದರೆ ಯಾವುದೇ ರಾಜ್ಯಕ್ಕಿಂತ ಹಿಂದೆ ಬೀಳುವುದಿಲ್ಲ. ಕೊಡುವ ಪರಿಸ್ಥಿತಿ ಬಂದರೆ, ಕೊಡುವ ಯೋಗ್ಯತೆ ಬಂದರೆ ಕೊಟ್ಟೇ ಕೊಡಬೇಕಾಗುತ್ತದೆ. ನಮ್ಮ ರಾಜ್ಯದ ಚಲನಚಿತ್ರೋತ್ಸವ ಅಲ್ಲ ನಾವು ಮಾಡಿದ್ದು. ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾಡಬೇಕಾದರೆ ಹಿಂದಿನ ಸಂಪ್ರದಾಯದಂತೆ ಮಾಡಿಕೊಂಡು ಬರಬೇಕಾಗುತ್ತದೆ. ನಾವು ಬೇರೆ ಬೇರೆ ರೀತಿ ಮಾಡುವುದಕ್ಕೆ ಬರುವುದಿಲ್ಲ. 400 ಹೊರ ರಾಷ್ಟ್ರದ ಪ್ರತಿನಿಧಿಗಳು ಚಲನಚಿತ್ರೋತ್ಸವಕ್ಕೆ ಬಂದಿದ್ದರು. ಅವರಿಗೆ ವೊವೆಂಟೋವನ್ನು ಸ್ಯಾಂಡಲ್‌ವುಡ್‌ನಲ್ಲಿ ಮಾಡಿಕೊಟ್ಟೆವು ಇಂಡಿಯನ್ ಡೆಲಿಗೇಟ್ಸ್‌ಗೆ ಹ್ಯಾಂಡ್ ಬ್ಯಾಗ್ ತರಹ ಮಾಡಿಕೊಟ್ಟಿದ್ದೇವೆ. ಅದು ಏಶ್ವ ಯೋಜನೆಯಲ್ಲಿ ಮಾಡಿಸಿಕೊಟ್ಟಿರುವುದು. ನಾವು ಏನು ಮಾಡಿದರೂ ಸರ್ಕಾರಹ ಇಲಾಖೆಗಳ ಮೂಲಕ ಮಾಡಿದ್ದೇವೆಯೇ ಹೊರತು ಬೇರೆ ಅಲ್ಲ. ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಳ್ಳದೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬಾಂಬೆಯಿಂದ ಯಾರೂ ಕಲಾವಿದರು ಬಂದಿರಲಿಲ್ಲವೆಂದು ಹೇಳಿದರು. ಮಾನ್ಯ ಸದಸ್ಯರು ಬಂದು ನೋಡಬೇಕಾಗಿತ್ತು. ಇಲ್ಲದಿದ್ದರೆ ಟಿ.ವಿ.ಯಲ್ಲಿ ವೀಕ್ಷಣೆ ಮಾಡಬೇಕಾಗಿತ್ತು. ಆಂಧ್ರದವರು, ಕೇರಳದವರು ಬಂದಿದ್ದರು, ತಮಿಳ್ನಾಡಿನಿಂದಲೂ ಕೆಲವರು ಬಂದಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಯಾರು ಬರಬೇಕು, ಬಿಡಬೇಕು ಎಂಬುದು ಡೆಲ್ಲಿ ಫಿಲಂ ಫೆಸ್ಟಿವಲ್ ಸಮಿತಿಗೆ ಸೇರಿದ್ದು. ಇನ್‌ಫೆವೈಟ್ ಮಾಡತಕ್ಕುದ್ದು ರಾಜ್ಯದ ಚಲನಚಿತ್ರೋತ್ಸವ ಮಂಡಳಿಗೆ ಸೇರಿದ್ದು. ಇದುವರೆಗೆ ಎಲ್ಲಾರಾಜ್ಯಗಳಲ್ಲಿ ಏನು ಪಾಲಿಸಿದ್ದಾರೆ ಅದನ್ನು ನಾವು ಮಾಡಿದ್ದೇವೆ. ವಿರೋಧಗಳು ಬಂದಾಗ ನಾವು ಇನ್ನೂ ಯಾವ ರೀತಿ ಮಾಡಬೇಕೆಂದು ಇದ್ದೆವು ಅದೆಲ್ಲವನ್ನೂ ಕಟ್ ಮಾಡಿದ್ದೇವೆ, ಅವಶ್ಯಕತೆ ಇದ್ದುದು ಮಾತ್ರ ಮಾಡಿದ್ದೇವೆ. ಆಮೇಲೆ ರಸ್ತೆಗಳ ಬಗ್ಗೆ ಕೇಳಿದ್ದಾರೆ. ರಸ್ತೆಗಳು ಚೆನ್ನಾಗಿದ್ದರೆ ನಿಮಗೆ ಸಮಾಧಾನವಾಗುತ್ತದೆ. ನಾವೇನು ನಮ್ಮ ಮನೆ ಮುಂದೆ ಅಥವಾ ಬಂಗಾರಪ್ಪನವರ ಮನೆ ಮುಂದೆ ಮಾಡಿದ್ದೇವೆಯೆ ? ಮೊದಲು ಕಬ್ಬನ್ ಪಾರ್ಕ್ ಹೇಗಿತ್ತು ? ಇವತ್ತು ಹೇಗಿದೆ ? ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ನಾವು ಮಾಡುವ ಕೆಲಸಗಳನ್ನು ಮಾಡಬೇಕಾಗುತ್ತದೆ. ಅದನ್ನು ನಾವು ಮಾಡಿದ್ದೇವೆ. ಅದು ಬಿಟ್ಟು ಇನ್ನೇನೂ ಮಾಡಿಲ್ಲ.

ಶ್ರೀ ಕೆ.ಗಂಗಾಧರ ಗೌಡ:- ಮಾನ್ಯ ಅಧ್ಯಕ್ಷರೆ, ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾಡಿದ್ದು ಸಂತೋಷ. ಆದರೆ ಯಾವ ಸಂದರ್ಭದಲ್ಲಿ ಅದನ್ನು ಮಾಡಬೇಕೆಂಬ ಸಾಮಾನ್ಯ ಜ್ಞಾನ ಸರ್ಕಾರಕ್ಕೆ ಇರಬೇಕಾಗುತ್ತದೆ. ತಾವು ಮಂಡ್ಯ ಜಿಲ್ಲೆಯವರು. ತಾವು ಕಾವೇರಿಗೆ ಬೆಂಕಿ ಬಿದ್ದಿದೆ ಎಂದು ಭಾಷಣ ಮಾಡಿದ್ದು ಕೇಳಿದ್ದೇವೆ. ನಮ್ಮ ರಾಜ್ಯಕ್ಕೆ ಬೆಂಕಿ ಬಿದ್ದ ಸಂದರ್ಭದಲ್ಲಿ, ಆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಕರ್ನಾಟಕ ರಾಜ್ಯದ ಚಲನಚಿತ್ರೋತ್ಸವದ ಪ್ರಮುಖರೆಲ್ಲ ವಿರೋಧ ಮಾಡಿದರು. ಅದೇರೀತಿ ರೈತ ಸಂಘದವರು, ರೈತರು ಬೇಡವೆಂದು ಹೇಳಿದ ಸಂದರ್ಭದಲ್ಲಿ ,ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು ಎಂದ ಹಾಗೆ ಈ ಕೆಲಸ ಮಾಡಿದ್ದಾರೆ. ಅದರಲ್ಲೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು ನೋಡಿದರೆ ಹಳ್ಳಿಯ ಜನರು ಖಂಡಿತವಾಗಿ ನಮ್ಮನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಲೋಕೋಪಯೋಗಿ ಇಲಾಖೆಗೆ

ಪ್ರಶ್ನೆ ಕೇಳಿ ಚರ್ಚೆ ಮಾಡಿದೆವು. ಒಂದು ಕಿಲೋಮೀಟರ್ ಮಾರ್ಗ ಕೊಡುವುದಕ್ಕೆ, ಹಳ್ಳಿಯಲ್ಲಿ ಹಣ ಕೊಡುವುದಕ್ಕೆ ಸಾಧ್ಯವಿಲ್ಲದ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹಾಳು ಮಾಡಿ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಒಂದು ರಾಜಕೀಯ ಚಲನಚಿತ್ರೋತ್ಸವವನ್ನಾಗಿ ಮಾಡಿದ್ದು ಸರಿಯೆ ?

ಶ್ರೀ ಎಸ್.ರಮೇಶ್:- ಹಾಡಿದ್ದೇ ಹಾಡೋ ಕಿಸಬಾಯಿ ದಾಸ ಎಂದಹಾಗೆ ಮಾನ್ಯ ಗಂಗಾಧರ ಗೌಡರು ಹೇಳುತ್ತಿದ್ದಾರೆ. ಇದು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಪ್ರಶ್ನೆ ಎಂದು ಹೇಳಿದ್ದೇನೆ. ಇದರಲ್ಲಿ ಪ್ರಧಾನಿಯವರ ಘನತೆ ಗೌರವದ ಪ್ರಶ್ನೆ ಇತ್ತು. ನಮ್ಮ ದೇಶದಲ್ಲಿ ಏನು ಬೇಕಾದರೆ ಪ್ರಾರಂಭ ಮಾಡಿ ಎಂದು ಹೊರದೇಶದವರನ್ನು ಮತ್ತು ನಮ್ಮ ದೇಶದವರನ್ನೂ ನಾವು ಕರೆಯುತ್ತಿದ್ದೆವು. ಹೀಗಿರುವಾಗ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಂಥ ಕಾರ್ಯಕ್ರಮವನ್ನು ರದ್ದು ಮಾಡಿದ್ದೇ ಆದರೆ ಇದು ಬರೀ ರಾಜ್ಯದ ಪ್ರಶ್ನೆ ಅಲ್ಲ, ದೇಶದ ಪ್ರಶ್ನೆ ಇತ್ತು ನಮ್ಮ ಮುಂದೆ. ದೇಶದ ಏಕತೆ, ಸಮಗ್ರತೆ, ಗೌರವದ ಪ್ರಶ್ನೆ ಬಂದಾಗ ಯಾವ ತ್ಯಾಗಕ್ಕೂ ನಾವು ಸಿದ್ಧವಾಗಬೇಕಾಗುತ್ತದೆ. ಇದನ್ನು ನಾವು ತೀರ್ಮಾನ ಮಾಡಿ ನಮ್ಮ ರಾಜ್ಯದಲ್ಲಿ ಮಾಡಿದ್ದರೆ ತಾವು ಹೇಳತಕ್ಕದ್ದಕ್ಕೆ ಒಪ್ಪುತ್ತೇನೆ. ಇದು ಒಂದು ವರ್ಷಕ್ಕೆ ಮುಂಚೆ ಆಗಿರತಕ್ಕ ತೀರ್ಮಾನ. ಕಾವೇರಿ ಪ್ರತಿಭಟನೆ ಶುರುವಾಗಿ ಹತ್ತು ದಿವಸವಾಗಿತ್ತು. ನಾವು ಈ ಬಗ್ಗೆ ಎಲ್ಲಾ ರೀತಿಯಲ್ಲೂ ಕೂಲಂಕಷವಾಗಿ ಚರ್ಚೆ ಮಾಡಿ ಕೊನೆಗೆ ರಾಷ್ಟ್ರದ ಗೌರವ ಪ್ರಶ್ನೆ ಬಂದಾಗ ತೀರ್ಮಾನ ಮಾಡಿದ್ದೇವೆ. ಇದೇನು ನಮ್ಮ ವೈಯಕ್ತಿಕ ತೀರ್ಮಾನ ಅಲ್ಲ. ತಮಗೆ ಬಡವರ ಬಗ್ಗೆ ಎಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನದಿಂದ ಅವರಿಗೆ ಸ್ಪಂದಿಸುವ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಹಾಕಿಕೊಂಡಿದ್ದೇವೆ. ನಾವು ನೀವು ಎಲ್ಲ ಸೇರಿ ಕೆಲಸ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:-ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾಗಿ ಖರ್ಚಾಗಿರತಕ್ಕ ವಿವರ ಕೊಡುವಾಗ ಚಲನಚಿತ್ರೋತ್ಸವ ಏರ್ಪಡಿಸಲು ತಗಲಿದ ವೆಚ್ಚ 80,99,254 ರೂಪಾಯಿಗಳು ಎಂದು ಹೇಳುತ್ತಾರೆ. ಶಾಶ್ವತ ಕಾಮಗಾರಿಗಳಿಗೆ ಒಂದು ಕೋಟಿ 30 ಲಕ್ಷ ರೂಪಾಯಿಗಳು ಎಂದು ಹೇಳಿ 2 ಕೋಟಿ 11 ಲಕ್ಷದ 42 ಸಾವಿರ ರೂಪಾಯಿಗಳ ವಿವರ ಕೊಡುತ್ತಾರೆ. ಇದರಲ್ಲಿ ಕೆಂದ್ರ ಸರ್ಕಾರ ಖರ್ಚು ಮಾಡಿರುವ ಹಣ 92 ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ. ಅವರು ನೇರವಾಗಿ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ, ರಾಜ್ಯ ಸರ್ಕಾರದ ಮೂಲಕವೇ ಮಾಡಬೇಕು. ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಹೇಳುವ ಸಂದರ್ಭದಲ್ಲಿ ಕಾರ್ಪೊರೇಷನ್‌ನಿಂದ 2 ಕೋಟಿ 82 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆಂದು ಹೇಳುತ್ತಾರೆ. ಪಿ.ಡಬ್ಲ್ಯೂ.ಡಿ.ಯಿಂದ ಮಾಡಿದ್ದೇವೆಂದು ಹೇಳುತ್ತಾರೆ. ಪ್ರವಾಸೋದ್ಯಮ ಇಲಾಖೆಯವರು ರಸ್ತೆಗೆ ಖರ್ಚುಮಾಡಿದ್ದಾರೆಂದು ಹೇಳುತ್ತಾರೆ. ಇವತ್ತು ಜನರ ಮನಸ್ಸಿನಲ್ಲಿ ಒಂದೇ ರಸ್ತೆಗೆ2-3 ಇಲಾಖೆಗಳು ವೆಚ್ಚ ಮಾಡಿರತಕ್ಕ ಮತ್ತು ದುರುಪಯೋಗವಾಗಿರತಕ್ಕ ಸಂದರ್ಭ ಇದೆ? ಇವತ್ತು ನೀವು ವಿವರ ಕೊಡುವಾಗ ಚಲನಚಿತ್ರೋತ್ಸವ ಸಂದರ್ಭದಲ್ಲಿಲೋಕೋಪಯೋಗಿ ಇಲಾಖೆಯಿಂದ ಖರ್ಚು ಮಾಡಲಿ, ಕಾರ್ಪೊರೇಷನ್‌ನಿಂದ ಖರ್ಚು ಮಾಡಲಿ ಎಲ್ಲಾ ವಿವರಗಳನ್ನು ಕೊಟ್ಟಿದ್ದರೆ ಗೊಂದಲಕ್ಕೆ ಅವಕಾಶವಾಗುತ್ತಿರಲಿಲ್ಲ. ಒಂದೇ ರಸ್ತೆಗೆ 2-3 ಇಲಾಖೆಯವರು ಖರ್ಚು ಹಾಕಿದ್ದಾರೆ ಎನ್ನುವ ಅನುಮಾನ ಇದೆ. ಆದ್ದರಿಂದ ಒಂದು ತನಿಖೆ ಮಾಡಿಸಿ. ಕಾರ್ಪೊರೇಷನ್ ಯಾವ ರಸ್ತೆಮಾಡಿತು, ಲೋಕೋಪಯೋಗಿ ಇಲಾಖೆ ಯಾವುದು ಖರ್ಚುಮಾಡಿಸಿತು, ಪ್ರವಾಸೋದ್ಯಮ ಇಲಾಖೆ ಯಾವುದು ಖರ್ಚು ಮಾಡಿತು ಅಥವಾ ಡಬಲ್ ಎಂಟ್ರಿ ಆಗಿದೆಯೇ ? ಈ ವಿವರದಲ್ಲಿ

ಜನರಲ್ಲಿ ಗೊಂದಲ ಇರುವುದರಿಂದ ಮತ್ತು ಒಂದು ಲೆಕ್ಕದ ಪ್ರಕಾರ 7-8 ಕೋಟಿ ರೂಪಾಯಿಗಳು ಎಲ್ಲಾ ಇಲಾಖೆಗಳಿಂದ ಖರ್ಚಾಗಿರುವುದರಿಂದ ಈ ಬಗ್ಗೆ ಸಮಗ್ರವಾಗಿ ತನಿಖೆಮಾಡಿಸಿ ಜನರಲ್ಲಿರತಕ್ಕ ಸಂಶಯವನ್ನು ನಿವಾರಣೆ ಮಾಡುತ್ತೀರಾ ?

12.20 ಪಿ.ಎಂ

ಶ್ರೀ ಎಸ್.ರಮೇಶ್:-ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರರಾದ ಶಿವಮೂರ್ತಿಯವರು ಆಗ ಇರಲಿಲ್ಲ. ಕಾರ್ಪೊರೇಷನ್‌ನಿಂದ ರೋಡ್ ಮಾಡಿಸಿದೆವು. ಯಾವಾಗ ಮಾಡಿಸಿದೆವು ? ನಾವು ಅವರನ್ನು ಕೇಳಿಕೊಂಡೆವು. ನೀವು ಮಾರ್ಚಿಯಲ್ಲಿ ಮಾಡುವ ರೋಡನ್ನು ಈಗ ಮಾಡಿರಪ್ಪ ಅಂತರರಾಷ್ಟ್ರೀಯ ಮಟ್ಟದವರು ಬರುತ್ತಿದ್ದಾರೆ, ನಮಗೆ ಸಹಾಯವಾಗುತ್ತದೆ ಎಂದು ಹೇಳಿದೆವು. ಕೆಲವು ಇಲಾಖೆಗಳಲ್ಲಿ ಕಾಮಗಾರಿಗಳನ್ನು ಏನು ಫೆಬ್ರವರಿ ಮಾರ್ಚಿಯಲ್ಲಿ ತೆಗೆದುಕೊಳ್ಳುತ್ತಿದ್ದರು ಅದನ್ನು ಮುಂಚೆ ಮಾಡಿ ಎಂದು ಮಾಡಿಸಿದೆವು. ಇವತ್ತು ನೀವೇ ಹೇಳಿ ಯಡಿಯೂರಪ್ಪನವರೇ, ಬೆಂಗಳೂರು ನಗರದಲ್ಲಿ ಸುತ್ತುತ್ತಾ ಇದ್ದೀರಲ್ಲ ಇವತ್ತು ರೋಡ್‌ಗಳು ಹೇಗಿದೆ ಹೇಳಿ. ಏಕಸ್ಮಾತ್ ಏನಾದರೂ ಆಪಾದನೆಗಳಿದ್ದರೆ ನೇರವಾಗಿ ಆಪಾದನೆ ಮಾಡಿ. ಇಂಥದ್ದು ಸರಿಯಿಲ್ಲ ಎಂದು ಹೇಳಿ. ಇಷ್ಟ ಇಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎಂದಹಾಗೆ ಯಡಿಯೂರಪ್ಪನವರು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:-ಮಂತ್ರಿಗಳು ತಪ್ಪು ತಿಳಿದುಕೊಂಡಿದ್ದಾರೆ. ಮಾಡಿರುವ ರೋಡ್ ಚೆನ್ನಾಗಿರಬಹುದು. ನಾನು ಹೇಳುತ್ತಿರುವುದು ಕಾರ್ಪೊರೇಷನ್ ಅದಕ್ಕೆ ಖರ್ಚು ಮಾಡಿದೆ. ಪಿ.ಡಬ್ಲ್ಯೂ.ಡಿ. ಯೂ ಅದಕ್ಕೆ ಖರ್ಚು ಮಾಡಿದೆ. ಪ್ರವಾಸೋದ್ಯಮ ಇಲಾಖೆಯೂ ಅದಕ್ಕೆ ಖರ್ಚು ಮಾಡಿದೆ. ಆದ್ದರಿಂದ ಈ ಮೂರು ಇಲಾಖೆಯವರು ಯಾವಯಾವ ರಸ್ತೆಗಳನ್ನು ಮಾಡಿಸಿದರು ಎಂಬ ಪಟ್ಟಿ ಕೊಟ್ಟಾಗ ನಾವು ಕಂಪೇರ್ ಮಾಡುವುದಕ್ಕೆ ಅನುಕೂಲವಾಗುತ್ತದೆ, ಜನರಲ್ಲಿರುವ ಸಂಶಯ ನಿವಾರಣೆಯಾಗುತ್ತದೆ. ಆದ್ದರಿಂದ ಯಾವ ಯಾವ ಇಲಾಖೆಯವರು ಯಾವ ಯಾವ ರೋಡ್ ಮಾಡಿದ್ದೀರಿ ಹೇಳಿ.

ಅಧ್ಯಕ್ಷರು :- ಆ ಡೀಟೈಲ್ಸ್ ಕೊಟ್ಟು ಕಳುಹಿಸಿ.

ಶ್ರೀ ಎಸ್.ರಮೇಶ್:- ಏನಾದರೂ ತಪ್ಪಿದ್ದರೆ ನನ್ನ ಗಮನಕ್ಕೆ ತರಲಿ. ಸರಿಪಡಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮೂರು ಇಲಾಖೆಯವರು . . . .

ಅಧ್ಯಕ್ಷರು:- ಡಬ್ಬಲ್ ಎಂಟ್ರಿ ಇಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವಾಗ ರೈತ ಸಂಘದವರಿಗೆ ಊಟ ಕೊಟ್ಟಿದ್ದನ್ನೂ ಇದರಲ್ಲಿ ಸೇರಿಸಿದ್ದಾರೆ. ನಾನು ನೋಡಿರತಕ್ಕುದ್ದು ಏನೆಂದರೆ, ಸಾಮಾನ್ಯವಾಗಿ ಪೋಲೀಸ್ ಸ್ಟೇಷನ್‌ಗೆ ಅರೆಸ್ಟ್ ಮಾಡಿ ಕರೆದುಕೊಂಡು ಹೋದರೆ ಪೋಲೀಸ್ ಇಲಾಖೆಯವರೇ ಊಟ ಕೊಡುವುದು. ಇದು ಮೊದಲಿನಿಂದ ನಡೆದಿರುವ ಪದ್ಧತಿ. ಚಲನಚಿತ್ರೋತ್ಸವದಿಂದ ಅವರಿಗೆ ಹಣ ಕೊಟ್ಟು, ಊಟ ಕೊಡಿಸಿದ್ದೇವೆ ಎಂದು ಹೇಳುತ್ತಿದ್ದಾರಲ್ಲ ಇದೊಂದು ಸುಳ್ಳು ಲೆಕ್ಕ. ಇದೊಂದೇ ನಿದರ್ಶನ. ಇಂಥ ಲೆಕ್ಕಗಳನ್ನು ಇವರು ಕೊಡುತ್ತಾ ಇದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಯಾರನ್ನಾದರೂ ದಸ್ತಗಿರಿ ಮಾಡಿದರೆ, ಒಳಗಡೆ ಇಟ್ಟರೆ ಊಟ ಕೊಡತಕ್ಕ ವ್ಯವಸ್ಥೆ ಎಲ್ಲಾ ಪೋಲೀಸ್ ಇಲಾಖೆಗೆ ಸೇರಿದ್ದು.

ಅಧ್ಯಕ್ಷರು :- ಊಟ ನೀರು . . . .

ಶ್ರೀ ವಾಟಾಳ್ ನಾಗರಾಜ್:-ಊಟ, ನೀರು. ಮುಂದೆ ಏನೂ ಇಲ್ಲ. ಈ ವ್ಯವಸ್ಥೆ ಸಂಪೂರ್ಣವಾಗಿ ಪೋಲೀಸ್ ಇಲಾಖೆಗೆ ಸೇರಿದ್ದು. ಪೋಲೀಸ್ ಇಲಾಖೆಯವರು ರೈತ ಸಂಘದವರನ್ನು ದಸ್ತಗಿರಿ ಮಾಡಿರುವಾಗ ತಮ್ಮ ಲೆಕ್ಕದಲ್ಲಿ ಊಟ ಕೊಟ್ಟಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವರು ಹೇಳಿದ್ದಾರೆ. ರಾಜ್ಯದ ಗೌರವದ ಪ್ರಶ್ನೆ ಎಂದು ಹೇಳಿದರು. ರಾಜ್ಯದ ಗೌರವದ ಪ್ರಶ್ನೆ ಅವತ್ತು ಕಾವೇರಿ ಸಂಬಂಧದಲ್ಲಿ ಇಡೀ ಗೌರವವೇ ಕೆಳಗೆ ಬಿದ್ದಿತ್ತು. ನಾವು ಯಾರೂ ಹೋಗಿರಲಿಲ್ಲ. ಇಂಥ ಕಾವೇರಿ ಕಣ್ಣೀರಿನ ಕಥೆ ಇರುವಾಗ ಸರ್ಕಾರದವರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ ನಡೆಸಿರತಕ್ಕುದ್ದು ಸರಿಯಲ್ಲ. ಇದರಲ್ಲಿ ರಾಜ್ಯದ ಗೌರವದ ಪ್ರಶ್ನೆ ಎಲ್ಲಿ ಬರುತ್ತದೆ ? ಅದನ್ನು ನಿಲ್ಲಿಸಬಹುದಾಗಿತ್ತು.

ಅಧ್ಯಕ್ಷರು:- ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದಾರೆ. ಇದೆಲ್ಲಾ ಮೊದಲೇ ತೀರ್ಮಾನ ಆಗಿಹೋಗಿತ್ತು ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಊಟದ ವ್ಯವಸ್ಥೆ ಹೇಳಿ.

ಅಧ್ಯಕ್ಷರು:- ಊಟದ್ದು ಹೇಳಿ.

ಶ್ರೀ ಎಸ್.ರಮೇಶ್:- ಮೇಜರ್ ಪ್ರೋಗ್ರಾಂಸ್ ಮಾಡಬೇಕಾದರೆ ರಕ್ಷಣಾ ವ್ಯವಸ್ಥೆಗೆ ಒಂದು ಎಸ್ಟಿಮೇಟ್ ನಾವು ಕೇಳೇ ಕೇಳುತ್ತೇವೆ. ವಾಟಾಳ್ ನಾಗರಾಜ್ ಅವರು ಹೇಳಿದ್ದು ನಿಜ. ಅವರನ್ನು ಅರೆಸ್ಟ್ ಮಾಡಿದಾಗ ಅವರೇ ಊಟ ಕೊಡುತ್ತಾರೆ. ಸಾವಿರಾರು ಜನ ಬರುತ್ತಾರೆ, ಅವರಿಗೆ ಒಳ್ಳೆಯ ರೀತಿಯಿಂದ ವ್ಯವಸ್ಥೆ ಮಾಡಬೇಕು, ಯಾವುದೂ ತೊಂದರೆಯಾಗಬಾರದು ಎಂದಾಗ ಸರ್ಕಾರದ ಜವಾಬ್ದಾರಿ ಬರುತ್ತದೆ. ಅದು ನಾವು ಮಾಡಿದ್ದೇವೆಯೇ ವಿನಾ ರೈತರಿಗೆ ಊಟ ಹಾಕಿದ್ದೇವೆ ಎಂಬುದು ಮುಖ್ಯವಲ್ಲ. ಏನು ಸ್ವಾಮಿ ರೈತರಿಗೆ ಊಟ ಹಾಕಿದ್ದು ದೊಡ್ಡ ವಿಷಯ ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್:-ದುಂದು ವೆಚ್ಚ ಎಂದು ಹೇಳಲಿಲ್ಲ. ನೀವು ರೈತರನ್ನು ಊರೊಳಗೆ ಬರದಹಾಗೆ ತಡೆಹಿಡಿದು ಒಂದು ರೀತಿಯ ಮಿಲಿಟರಿ ವ್ಯವಸ್ಥೆ ಮಾಡಿಕೊಂಡು ನೀವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನಡೆಸಿದ್ದೀರಿ.ಅದರ ಕೀರ್ತಿ ನಿಮಗೆ ಬರಲಿ. ಆದರೆ ನಾನು ಹೇಳುವುದು ದುಂದುವೆಚ್ಚದ್ದಲ್ಲ, ಲೆಕ್ಕ. ಇದು ಯಾವ ಹಣ ?ನಿಮ್ಮ ಹಣವೇ ? ಪೋಲೀಸ್ ಇಲಾಖೆಯದೇ, ಅದನ್ನು ತಾವು ಹೇಳಬೇಕು.

ಶ್ರೀ ಎಸ್.ರಮೇಶ್:-ರಕ್ಷಣಾ ವ್ಯವಸ್ಥೆಗೆ ಕೊಡಬೇಕಾದ್ದು ಕೊಟ್ಟಿದ್ದೇವೆ.

ಅಧ್ಯಕ್ಷರು :- ಎಲ್ಲಾ ಸರ್ಕಾರದ ಹಣ.

ಶ್ರೀ ವಾಟಾಳ್ ನಾಗರಾಜ್:- ಹಣ ಕೊಡಲಿ ಸ್ವಾಮಿ. ಪೋಲೀಸರೂ ಹಣ ಕೊಡುವುದು, ಇವರೂ ಕೊಡುವುದು . . . .

ಶ್ರೀ ಎಸ್.ರಮೇಶ್:- ಹಾಗೇನಿಲ್ಲ.

ಶ್ರೀ ಕೆ.ಶಿವಮೂರ್ತಿ:- ಒಟ್ಟು ಖರ್ಚಾಗಿರುವುದು 90,787 ರೂಪಾಯಿಗಳು. ಅವರಿಗೆ ಪೋಲೀಸರೇ ಊಟ ಹಾಕಿರುವುದು. ರೈತರನ್ನು ಅರೆಸ್ಟ್ ಮಾಡಿದಮೇಲೆ ಅವರನ್ನು ಉಪವಾಸ ಇರುವುದಕ್ಕೆ ನಾವು ಬಿಡುವುದಿಲ್ಲ. ಊಟ ಹಾಕಬೇಕಾಗುತ್ತದೆ. ಅದು ಬಿಟ್ಟು ಖರ್ಚಾಗಿರುವುದು. ರಕ್ಷಣಾ ಶಿಸ್ತು ಪಾಲನೆಗೋಸ್ಕರ ಇಷ್ಟು ಖರ್ಚು ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ಪಿ.ಡಬ್ಲ್ಯೂ.ಡಿ.ಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದರು. ಬ್ರೇಕಪ್ ಫಿಗರ್ ನನ್ನ ಹತ್ತಿರ ಇದೆ. Civil and electrical works entrusted by the Departmentof Infor-

mation and Publicity ಗೆ 10 ಲಕ್ಷದ, 50 ಸಾವಿರ ರೂಪಾಯಿಗಳು. Civil and electrical works entrusted by the Youth Services Department Rs. 21,88,000/- Civil and electrical works entrusted to Horticulture department ಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತೆ ರವೀಂದ್ರ ಕಲಾಕ್ಷೇತ್ರದ ರಿಪೇರಿ ಕೆಲಸಅದೆಲ್ಲಾ ಇದರಲ್ಲಿ ಸೇರಿದೆ. ಅದನ್ನು ಉದ್ಘಾಟನೆ ಮಾಡಿದಾಗಿನಿಂದಲೂ ರಿಪೇರಿಯನ್ನೇ ಮಾಡಿರಲಿಲ್ಲ. ಅದರಲ್ಲಿ ಕೆಲವು ಸಾಮಾನುಗಳನ್ನು ನಾವು ಹೊಸದಾಗಿ ಕೊಂಡು ಕೊಂಡು ಅಳವಡಿಸಿದ್ದೇವೆ. ಅದಕ್ಕೆ 24 ಲಕ್ಷ ರೂಪಾಯಿಗಳು ಖರ್ಚು ಆಗಿದೆ. ಇದನ್ನೆಲ್ಲಾ ಲೋಕೋಪಯೋಗಿ ಇಲಾಖೆಯವರೇ ಖರ್ಚುಮಾಡುತ್ತಿದ್ದಾರೆ. ಅವರೇ ಲೆಕ್ಕ ಕೊಟ್ಟಿದ್ದಾರೆ. ಅದಕ್ಕೆ99 ಲಕ್ಷ 23 ಸಾವಿರ ರೂಪಾಯಿ ಖರ್ಚುಮಾಡಿದ್ದೇವೆ. ಇದು ಈ 3 ಕೋಟಿ ರೂಪಾಯಿಯಲ್ಲಿ ಸೇರಿಕೊಂಡಿದೆ. ಇಷ್ಟನ್ನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹಾಗೂ ಮಾನ್ಯ ಯಡಿಯೂರಪ್ಪನವರಿಗೆ ತಿಳಿಸಬಯಸುತ್ತೇನೆ.

ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಕಟ್ಟಡಗಳ ನಿರ್ವಹಣೆ.

(1373) ಶ್ರೀ ಎ.ಕೆ.ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಸರ್ಕಾರಿ ಕಟ್ಟಡಗಳು ಮತ್ತು ವಸತಿ ಗೃಹಗಳು ಅಂದರೆ ಕಾರ್ಲಟನ್ ಹೌಸ್, ಕುಮಾರ ಕೃಪ, ಆರ್.ಸಿ.ಕಾಲೇಜು ಆರಕ್ಷಕ ವಸತಿ ಗೃಹಗಳು, ಕ್ರೆಸೆಂಟ್ ರಸ್ತೆಯ ವಸತಿಗಳು ಮತ್ತು ಶಾಲಾ ಕಟ್ಟಡಗಳು ಬಹಳ ಹಳೆಯದಾಗಿದ್ದು, ದುಸ್ಥಿತಿಯಲ್ಲಿದ್ದು, ವಾಸಕ್ಕೆ ಇರಲು ಬಹಳ ಅಸಾಧ್ಯವಾಗಿರುವ ಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ ವಿಧಾನ ಸಭಾ ಸದನದಲ್ಲಿ ಸಂಬಂಧಿಸಿದ ಮಂತ್ರಿಗಳು ನೀಡಿದ ಪರಿಹಾರದ ಆಶ್ವಾಸನೆ ಹಾಗೂ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಸ್ಥಳ ಪರಿವೀಕ್ಷಣಾ ಸಮಯದಲ್ಲಿ ಕೊಟ್ಟ ಭರವಸೆ ಬಗ್ಗೆ ಗಮನ ಹರಿಸುತ್ತೀರಾ .

ಇ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯಮಂತ್ರಿಗಳು ಸದನದಲ್ಲಿ ನೀಡಿದ ಆಶ್ವಾಸನೆ ಹಾಗೂ ಪರಿವೀಕ್ಷಣೆ ಮಾಡಿ ನೀಡಿದ ಭರವಸೆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲದಿರುವುದು ನಿಜವೇ.

ಈ ಸರ್ಕಾರವು ಭರವಸೆಯನ್ನು ಈಡೇರಿಸದಿರಲು ಕಾರಣವೇನು.

ಉ ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ ಹೌದು.

ಆ ಹೌದು.

ಇ ನಿಜವಲ್ಲ. ಲಭ್ಯವಿರುವ ಅನುದಾನದಲ್ಲಿ ಕೆಲವು ಕಟ್ಟಡಗಳ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ ಮೇಲಿನ 'ಇ' ಪ್ರಶ್ನೆಗೆ ನೀಡಲಾದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ ಹೌದು. ಹಣದ ಲಭ್ಯತೆಯ ಆಧಾರದ ಮೇಲೆ ಮತ್ತಷ್ಟು ಕಟ್ಟಡಗಳ ದುರಸ್ತಿ ಮಾಡಲಾಗುವುದು.